## ಹತ್ತನೇ ತರಗತಿ ಮಾದರಿ ಪ್ರಶ್ನೆ ಪತ್ರಿಕೆ

## ಕನ್ನಡ ದ್ವಿತೀಯ ಭಾಷೆ (ಹೊಸ ಪಠ್ಯಕ್ಕೆ ಸಂಬಂಧಿಸಿದಂತೆ)(ಖಾಸಗಿ ವಿದ್ಯಾರ್ಥಿಗಳಿಗಾಗಿ)(ಪಿ/ಎಫ್)

## ಪ್ರಶ್ನೆ ಪತ್ರಿಕೆ

**ಗರಿಷ್ಠ ಅಂಕ : 100** **ಅವಧಿ : 2:30ಗಂಟೆಗಳು**

**ಸೂಚನೆಗಳು :**

- ಪ್ರಶ್ನೆ ಪತ್ರಿಕೆಯು ಎ, ಬಿ ಮತ್ತು ಸಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ.
- ವಿಭಾಗ 'ಎ' ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೋಷಕ ಅಧ್ಯಯನ) 68 ಅಂಕಗಳು
- ವಿಭಾಗ 'ಬಿ' ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು 15 ಅಂಕಗಳು
- ವಿಭಾಗ 'ಸಿ' ವಾಕ್ಯರಚನೆ ಹಾಗೂ ಬರವಣಿಗೆ ಕೌಶಲ 17 ಅಂಕಗಳು
- ಉತ್ತರಗಳು ನೇರವೂ, ಸ್ಪಷ್ಟವೂ ಆಗಿರಬೇಕು
- ವಸ್ತುನಿಷ್ಠ ಪ್ರಶ್ನೆಗಳಿಗೆ, ಹೊಡೆದು, ಅಳಿಸಿ, ಕೆರೆದು ಬರೆದ ಉತ್ತರಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.
- ಪೆನ್ಸಿಲ್ ಬಳಸಿ ಬರೆದ ಉತ್ತರಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.

## ಭಾಗ– 'ಎ'

## ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೋಷಕ ಅಧ್ಯಯನ) 68 ಅಂಕಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದೇ ವಾಕ್ಯದ ಉತ್ತರವನ್ನು ಬರೆಯಿರಿ :** **10x1=10**

1. ಇಂದ್ರನು ಗಿಳಿಯ ಯಾವ ಗುಣವನ್ನು ಮೆಚ್ಚಿದನು ?
2. ಬಾಣಕ್ಕೆ ಗುರಿಯಾಗುವಷ್ಟು ದೂರ ಎಂದರೇನು ?
3. ಅಜ್ಜ ಕಾಯಿದೆಯನ್ನು ಮೀರಲು ಕಾರಣವೇನು ?
4. ಪಿಷಾರೊದಿ ಯಾರು ?
5. ಬನದ ಗೋಪಾಲ ಯಾರು ?
6. ನಿತ್ಯ ದಾಸೋಹ ಎಂದರೇನು ?
7. ಮಗುವು ಅಜ್ಜನನ್ನು ಏನೆಂದು ಕೇಳಿತು ?
8. ಮಗುವಿನ ಮುಗ್ಧ ನಂಬಿಕೆಗೆ ಗೊಮ್ಮಟನ ಪ್ರತಿಕಿಯ್ರೆ ಏನು ?
9. ಸುಖದ ಸುಗ್ಗಿಯು ಯಾವಾಗ ಬರುವುದು ?
10. ಯಾವುದಕ್ಕೆ ಹಗಲಿರುಳು ಹೋರಾಡಬೇಕು ?

This document was created using SOLID CONVERTER PDF
To remove this message, purchase the product at www.SolidPDF.com

**ಈ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಎರಡು, ಮೂರು ವಾಕ್ಯಗಳ ಉತ್ತರವನ್ನು ಬರೆಯಿರಿ : 14x2=28**

11. ಗಿಳಿಯು ಇಂದ್ರನನ್ನು ಎಂತಹ ವರವನ್ನು ಕೇಳಿತು ?
12. ಕ್ರಿಕೆಟ್ ಪೂರ್ವದ ರಾಹುಲರ ಸಾಧನೆ ಹೇಗಿತ್ತು ?
13. ಪುಟ್ಟರಾಜಗವಾಯಿಗಳು ನಾಟಕ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಏನು ?
14. ಕರ್ನಾಟಕದ ಕ್ರಿಕೆಟ್ ಆಟಗಾರರ ಹಿರಿಮೆ ಎಂತಹುದು ?
15. ಪಶ್ಚಿಮ ಘಟ್ಟಗಳನ್ನು ಅತಿಯಾಗಿ ದೋಚಿದುದರ ಪರಿಣಾಮವೇನು?
16. ಗೋಪಾಲನ ತಾಯಿಗೆ ಬಡತನದ ನೆನೆಪಾದುದು ಹೇಗೆ ?
17. ಜನರು ಬಾಹುಬಲಿಯ ಬಳಿ ಬಂದು ಏನು ಮಾಡುವರು ?
18. ಮಗನು ಬೇಗನೆ ಏಳಬೇಕೆಂಬ ಬಯಕೆ ತಾಯಿಗೆ ಆಗಲು ಕಾರಣವೇನು ?
19. "ದೀಪದೆದುರಿಗೆ ತಿಮಿರ ಸರಿಯುವಂತ" ಎಂದರೇನು ?
20. "ಸದ್ದು ಮಾಡದಿರು" ಪದ್ಯದಲ್ಲಿ ಆಡಂಬರವಿರದ ಕರ್ತವ್ಯಪರತೆ ಎಂಬುವುದರ ಬಗ್ಗೆ ನಿಮ್ಮ ಅಭಿಪ್ರಾಯವೇನು ?
21. ಅಪ್ಪಯ್ಯನಿಗೆ ಮಕ್ಕಳು ಹೇಗೆ ಹೆಸರು ತರುತ್ತಾರೆ ?
22. ಅರ್ಜುನನು ಒಡಲು ಒಡೆಯುವಂತೆ ನಗಲು ಕಾರಣವೇನು ?
23. "ಅಯ್ಯೋ ಕ್ಷಮಿಸಿ" ಎಂದು ಸಾವಿತ್ರಿ ಹೇಳಿದ್ದು ಏಕೆ?
24. ಹೆಗಡೆಯವರ ಹೆಂಡತಿ ಅನ್ನಪೂರ್ಣೆ ಕೆಟ್ಟವಳು ಎನಿಸಿದ್ದು ಏಕೆ?

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ವಾಕ್ಯಗಳಲ್ಲಿ ಬರೆಯಿರಿ : 4x3=12**

25. "ಅವರ ಜನಪ್ರಿಯತೆಗೆ ಬೇರೆ ಸಾಕ್ಷಿಬೇಡ."
26. "ನಿನ್ನಲ್ಲಿ ಹತ್ತು ಕಿಲೋವಾಟ್ ಶಕ್ತಿಯ ಬುದ್ಧಿ ಇದೆ."
27. "ನನ್ನ ಇರುವಿಕೆಯ ಅರಿವಾಗುತ್ತದೆ."
28. "ಎಮ್ಮರಮನೆಯ ನಾರಿಯರೆ ಸಾಕು."

**ಈ ಸಾಹಿತಿಗಳ ಸ್ಥಳ, ಕಾಲ, ಕೃತಿಗಳನ್ನು ವಾಕ್ಯಗಳಲ್ಲಿ ಬರೆಯಿರಿ : 2x3=6**

29. ನಾಗೇಶ ಹೆಗಡೆ
30. ಬಸವರಾಜ ಸಾದರ

This document was created using SOLID CONVERTER PDF
To remove this message, purchase the product at www.SolidPDF.com

**ಈ ಕೆಳಗಿನ ಪದ್ಯಭಾಗಗಳನ್ನು ಪೂರ್ಣಗೊಳಿಸಿ :** **4x1=4**

31. ಹಸುವಿದ್ದು ಫಲವೇನು ______________________________

________________________________ ಚೆನ್ನಮಲ್ಲಿಕಾರ್ಜುನ.

**ಅಥವಾ**

ವೇದಾಂತವನೋದಿ______________________________

______________________________ ಕಪಿಲಸಿದ್ಧ ಮಲ್ಲಿಕಾರ್ಜುನ.

**ಈ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳ ಉತ್ತರವನ್ನು ಬರೆಯಿರಿ :** **2x4=8**

32. ಅಜ್ಜನು ಸಾಹೇಬರ ಮನೆಗೆ ಹೋಗಲು ಕಾರಣವಾದ ಘಟನೆ ತಿಳಿಸಿ.

**ಅಥವಾ**

ಪ್ರಾಮಾಣಿಕ ಶಿಕ್ಷಕನಿಗೆ ದೊರೆತ ಗೌರವವೂ ನೊಬಲಿಗೆ ಸಮಾನವಾದದ್ದು ಏಕೆ ?

33. ಜೀವನದ ಪರಮಗುರಿಯನ್ನು ಕುರಿತು ಅಡಿಗರು ನೀಡಿರುವ ಸಂದೇಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಅಥವಾ**

ಮನುಜತೆಯ ಸಾರ್ಥಕತೆಗೆ ಕವಿ ಅಡಿಗರು ನೀಡಿರುವ ಸಲಹೆಗಳನ್ನು ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ.

This document was created using SOLID CONVERTER PDF To remove this message, purchase the product at www.SolidPDF.com

## ಭಾಗ–'ಬಿ'

## ಅನ್ವಯಿಕ ವ್ಯಾಕರಣ – 15 ಅಂಕಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ಕೆಳಗೆ ಕೊಟ್ಟಿರುವ ನಾಲ್ಕು ಪರ್ಯಾಯಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ :**

**15x1=15**

34. 'ವರ್ಣನೆ' ಪದದ ತದ್ಭವ ರೂಪ :

(ಎ) ಬಣ್ಣನೆ (ಸಿ)ವರ್ಣಿಸು

(ಬಿ)ಬಣ್ಣಿಸು (ಡಿ)ಚಿತ್ರಿಸು

35.'ಮಾಟ' ಪದದ ಅರ್ಥ :

(ಎ)ಮಾಡಿಸು (ಸಿ)ಮಾಡು

(ಬಿ)ಚೆಲುವು (ಡಿ)ನೋಟ

36.ಈ ತೋಟದ ತುಂಬ ಬಣ್ಣ ಬಣ್ಣದ ಹೂವುಗಳಿವೆ. ಈ ವಾಕ್ಯದಲ್ಲಿನ ಬಣ್ಣ ಬಣ್ಣ ಎಂಬ ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ :

(ಎ)ನುಡಿಗಟ್ಟು (ಸಿ)ಅವ್ಯಯ

(ಬಿ)ದ್ವಿರುಕ್ತಿ (ಡಿ)ಜೋಡಿ ಪದ

37.'ಜ್ಞಾನ' ಪದದ ವಿರುದ್ಧಪದ :

(ಎ)ಅಜ್ಞಾನ (ಸಿ)ಸುಜ್ಞಾನ

(ಬಿ)ಅವಿಜ್ಞಾನ (ಡಿ)ನಿರ್ಜ್ಞಾನ

38.'ಕೊಳಲೂದಿ' ಎಂಬ ಪದವು ಈ ಸಂಧಿಗೆ ಉದಾಹರಣೆ

(ಎ)ಆಗಮ (ಸಿ)ಲೋಪ

(ಬಿ)ಆದೇಶ (ಡಿ) ಸವರ್ಣ

This document was created using SOLID CONVERTER PDF To remove this message, purchase the product at www.SolidPDF.com

39.'ಕೆಂದಾವರೆ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ :

(ಎ)ಗಮಕ (ಸಿ)ಅಂಶಿ

(ಬಿ)ಕರ್ಮಧಾರಯ (ಡಿ)ದ್ವಿಗು

40. ಪಂಚಮಿ ವಿಭಕ್ತಿ ಪ್ರತ್ಯಯ ಯಾವುದೆಂದರೆ :

(ಎ)ಇಂದ (ಸಿ)ದೆಸೆಯಿಂದ

(ಬಿ)ಅನ್ನು (ಡಿ)ಅಲ್ಲಿ

41.'ಚಿಗತಾವು' ಪದದ ಗ್ರಾಂಥಿಕ ರೂಪ :

(ಎ)ಚಿಗುರು (ಸಿ)ಚಿಗುರುತ್ತವೆ

(ಬಿ)ಚಿಗರಿವೆ (ಡಿ)ಚಿಗುರುವುವು

42. 'ಚಂದ್ರಮುಖಿ' ಪದದಲ್ಲಿರುವ ಅಲಂಕಾರ :

(ಎ)ರೂಪಕ (ಸಿ)ಉಪಮ

(ಬಿ)ಅನುಪ್ರಾಸ (ಡಿ)ಯಮಕ

43. 'ತಿಂದನು' ಪದದಲ್ಲಿರುವ ಧಾತು :

(ಎ)ತಿಂದ (ಸಿ)ತಿಂದೆ

(ಬಿ)ತಿನ್ನು (ಡಿ)ತಿನ್ನಲ್ಲ

44.ಒಂದು ದೀರ್ಘಾಕ್ಷರದ ಉಚ್ಚರಕ್ಕೆ ಬೇಕಾದ ಕಾಲವನ್ನು ಹೀಗೆಂದು ಕರೆಯುತ್ತಾರೆ :

(ಎ)ಮಾತ್ರೆ (ಸಿ)ಲಘು

(ಬಿ)ಗುರು (ಡಿ)ಗಣ

45.ಜೋಡುನುಡಿಗೆ ಉದಾಹರಣೆ ಇದು:

(ಎ)ಮನೆಮಠ (ಸಿ)ಬೇಗಬೇಗ

(ಬಿ)ಸರಸರ (ಡಿ)ಕಣ್ಕಟ್ಟು

This document was created using SOLID CONVERTER PDF
To remove this message, purchase the product at www.SolidPDF.com

46.'ಮಳೆಗಾಲ' ಎಂಬ ಪದವನ್ನು ಬಿಡಿಸಿ ಬರೆದಾಗ :

(ಎ)ಮಳೆ+ಕಾಲ (ಸಿ)ಮಳೆ+ಗಾಲ

(ಬಿ)ಮಳೆಯ+ಕಾಲ (ಡಿ)ಮಳೆಯ+ಗಾಲ

47.'ಪೊಡವಿ' ಪದದ ಸಮಾನಾರ್ಥಕ ಪದ :

(ಎ)ಆಕಾಶ (ಸಿ)ಹೊಟೆ

(ಬಿ)ಭೂಮಿ (ಡಿ)ಮೋಡ

48.ನೆಲದಮ್ಮ ನವನಧುವೆ ಆದಳಿಂತು ಇಲ್ಲಿ ಬಳಸಬೇಕಾದ ಲೇಖನ ಚಿಹ್ನೆ :

(ಎ)ಉದ್ಧರಣ (ಸಿ)ಆಶ್ಚರ್ಯಸೂಚಕ

(ಬಿ)ಪ್ರಶ್ನಾರ್ಥಕ (ಡಿ)ಅಲ್ಪವಿರಾಮ

49. ನಾಮ ಪ್ರಕೃತಿಯೊಂದಿಗೆ ಸೇರುವ ಪ್ರತ್ಯಯಗಳನ್ನು ಹೀಗೆನ್ನುತ್ತಾರೆ :

(ಎ)ಪ್ರತ್ಯಯ (ಸಿ)ತದ್ಧಿತಾಂತ

(ಬಿ)ವಿಭಕ್ತಿಪ್ರತ್ಯಯ (ಡಿ)ಪ್ರಾತಿಪದಿಕ

## ಭಾಗ – 'ಸಿ'

## ವಾಕ್ಯರಚನೆ ಹಾಗೂ ಬರವಣಿಗೆ ಕೌಶಲ 17 ಅಂಕಗಳು

**ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : 1x4=4**

ವರ್ಷದ ಆರಂಭಕ್ಕೆ ಎಲ್ಲ ದಿನಗಳೂ ಶ್ರೇಷ್ಠವೇ. ಪಾಶ್ಚಾತ್ಯರು ಜನವರಿ ಒಂದನ್ನು ಹೊಸವರ್ಷದ ಮೊದಲ ದಿನ ಎಂದು ಭಾವಿಸಿದರೆ ಭಾರತೀಯರು ಯುಗಾದಿಗೆ ಮಹತ್ವ ನೀಡುತ್ತಾರೆ. ಯುಗಾದಿ ಎಂಬುದು ಹಳತನ್ನು ಮರೆತು, ಬದಲಿರುವ ದಿನಗಳ ಬೇವು ಬೆಲ್ಲವೆರಡನ್ನೂ ಸಮಾನಾಗಿ ಸ್ವೀಕರಿಸಬೇಕೆಂಬ ಸಂದೇಶವನ್ನು ನೀಡುತ್ತವೆ. ಅದು ಚಂದ್ರಮಾನದ್ದೇ ಇರಲಿ, ಸೌರಮಾನದ್ದೇ ಇರಲಿ, ಅದು ಚೈತ್ರ ಮಾಸದಲ್ಲೇ ಬರುತ್ತದೆ. ಚೈತ್ರವೆಂದರೆ ವಸಂತ.

50.ಪಾಶ್ಚಾತ್ಯರು ಯಾವ ದಿನವನ್ನು ಹೊಸವರ್ಷವೆಂದು ಭಾವಿಸಿದ್ದಾರೆ ?

51. ಭಾರತೀಯರಿಗೆ ಹೊಸವರ್ಷ ಎಲ್ಲಿಂದ ಪ್ರಾರಂಭವಾಗುತ್ತದೆ ?

52.ಯುಗಾದಿಯ ಮಹತ್ವವೇನು ?

53.ಯುಗಾದಿಯು ಯಾವ ಮಾಸದಲ್ಲಿ ಬರುತ್ತದೆ ?

This document was created using SOLID CONVERTER PDF
To remove this message, purchase the product at www.SolidPDF.com

**54.**ಬಳ್ಳಾರಿ ಸರಕಾರಿ ಪ್ರೌಢಶಾಲೆಯ 10ನೇ ತರಗತಿ 'ಎ' ವಿಭಾಗದಲ್ಲಿ ಓದುತ್ತಿರುವ ನೀವು ರಾಜು/ಲತಾ ಎಂದು ಭಾವಿಸಿ ಧಾರವಾಡದ ಜಯನಗರದಲ್ಲಿ ವಾಸವಾಗಿರುವ ನಿಮ್ಮ ಗೆಳತಿ/ಗೆಳೆಯ ಚೈತ್ರಳನ್ನು / ದರ್ಶನ್‌ನನ್ನು ನಿಮ್ಮ ಶಾಲೆಯಲ್ಲಿ ಆಚರಿಸುವ ರಾಜ್ಯೋತ್ಸವಕ್ಕೆ ಆಹ್ವಾನಿಸಿ ಪತ್ರ ಬರೆಯಿರಿ.

**ಅಥವಾ**

ನೀವು 10ನೇ ತರಗತಿಯಲ್ಲಿ ಪಾಸಾಗಿದ್ದೀರೆಂದು ತಿಳಿದು ಮುಂದಿನ ವಿದ್ಯಾಭ್ಯಾಸಕ್ಕಾಗಿ ವರ್ಗಾವಣೆ ಪತ್ರ ಕೊಡುವಂತೆ ಕೋರಿ ಶಾಲೆಯ ಮುಖ್ಯಸ್ಥರಿಗೆ ಒಂದು ಅರ್ಜಿ ಬರೆಯಿರಿ. **1x5=5**

**55.ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ :**

- ಮೂರ್ತಿ ಚಿಕ್ಕದಾದರು ಕೀರ್ತಿ ದೊಡ್ಡದು. **1x3=3**
- ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ.
- ಕೈ ಕೆಸರಾದರೆ ಬಾಯಿ ಮೊಸರು.

**56. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಕುರಿತು ಹತ್ತು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ** **1x5=5**

- ಗಣಕಯಂತ್ರಗಳ ಪ್ರಾಮುಖ್ಯತೆ.
- ಪರಿಸರ ಮಾಲಿನ್ಯದ ತಡೆಗಟ್ಟುವಿಕೆ.
- ಶಿಕ್ಷಕರ ದಿನಾಚರಣೆ.

This document was created using SOLID CONVERTER PDF
To remove this message, purchase the product at www.SolidPDF.com